

# ನರಿ ಮತ್ತು ಕೊಕ್ಕರೆ

ಎಸ್.ಎನ್. ಚಂದ್ರಕಲಾ ಕೊಪ್ಪ

ಅದೊಂದು ದಟ್ಟ ಕಾಡು. ಗಿಳಿ, ಗುಬ್ಬಿ, ಕಾಗೆ, ಕೊಕ್ಕರೆ, ಕೋಗಿಲೆ ವಿವಿಧ ಬಗೆಯ ಪಕ್ಷಿಗಳು. ಆನೆ, ಕರಡಿ, ಚಿರತೆ, ನರಿ, ಸಿಂಹ, ಹುಲಿ ಹಲವು ವಿಧದ ಪ್ರಾಣಿಗಳು ಅಲ್ಲಿ ವಾಸಿಸುತ್ತಿದ್ದವು.

ವರ್ಷಕ್ಕೊಮ್ಮೆ ಹಾಡು, ನೃತ್ಯ, ಬೇಟೆ, ಓಟ, ಜಿಗಿತ ಮೊದಲಾದ ಸ್ಪರ್ಧೆಗಳನ್ನು ಏರ್ಪಡಿಸಿ ಹಬ್ಬ ಆಚರಿಸುವುದು ಅಲ್ಲಿನ ಪದ್ಧತಿ. ನಂತರ ವಿವಿಧ ಸ್ಪರ್ಧೆಗಳಲ್ಲಿ ವಿಜೇತರಾದವರಿಗೆ ಸನ್ಮಾನಿಸುವುದು ಕ್ರಮ. ಸೌಂದರ್ಯ ಸ್ಪರ್ಧೆಯಲ್ಲಿ ಗೆದ್ದ ಪುರುಷರಿಗೆ 'ವನಸುಂದರ', ಸ್ತ್ರೀಯರಿಗೆ 'ವನಸುಂದರಿ' ಪ್ರಶಸ್ತಿ ನೀಡಲಾಗುತ್ತಿತ್ತು.

ಈ ಬಾರಿಯ ವನಸುಂದರನಾಗಿ ನರಿಯಪ್ಪ ಹಾಗೂ ವನಸುಂದರಿಯಾಗಿ ಆತನ ಪತ್ನಿ ನರಿಯಮ್ಮ ಆಯ್ಕೆಯಾದರು.

ನೀಳ ಕತ್ತು, ನೀಳ ಕಾಲುಗಳ ಅಚ್ಚ ಬಿಳಿ ಬಣ್ಣದ ಕೊಕ್ಕರೆ ಚೆಲುವೆಯರ ಗುಂಪಿನಲ್ಲಿ ಸೇರಿರುವಳು. ಅವಳಿಗೆ ವನಸುಂದರಿ ಸ್ಪರ್ಧೆಯಲ್ಲಿ ತಾನೇ ಗೆಲ್ಲಬೇಕೆಂಬ ಅತಿ ಆಸೆಯೂ ಇತ್ತು. ಆದರೆ ಫಲಿತಾಂಶದಲ್ಲಿ ಬೂದು ಬಣ್ಣದ ಚೂಪು ಮುಖದ ನರಿಯಮ್ಮ ಗೆದ್ದದ್ದು ಆಕೆಗೆ ತೀವ್ರ ಅಸಮಾಧಾನವಾಗಿತ್ತು.

ಸ್ಪರ್ಧೆಯಲ್ಲಿ ಗೆಲ್ಲಲು ಸೌಂದರ್ಯದೊಂದಿಗೆ ಬುದ್ಧಿವಂತಿಕೆಯೂ ಅವಶ್ಯಕವಾಗಿತ್ತು. ನರಿಯಮ್ಮನಲ್ಲಿ ಬುದ್ಧಿವಂತಿಕೆಗೆ ಕೊರತೆಯಿರಲಿಲ್ಲ. ಹಾಗಾಗಿ 'ವನಸುಂದರಿ' ಪ್ರಶಸ್ತಿ ಲಭ್ಯವಾಗಿತ್ತು. ಮುಂದಿನ ವರ್ಷವಾದರೂ ತಾನೇ ವನಸುಂದರಿ ಆಗಬೇಕೆಂಬ ಬಯಕೆಯಿಂದ ಕೊಕ್ಕರೆ ಯೋಚಿಸಿತು. ನರಿಯಮ್ಮನಿಂದ ಪಾಠ ಕಲಿಯಲು ನಿರ್ಧರಿಸಿತು. ಆದರೆ ನರಿಯಮ್ಮ ಅಷ್ಟು ಸುಲಭವಾಗಿ ತನ್ನ ಬುದ್ಧಿವಂತಿಕೆಯ ಗುಟ್ಟನ್ನು ಬಿಟ್ಟು ಕೊಡುವವಳಲ್ಲ. ಉಪಾಯದಿಂದ ತಿಳಿದು ಕೊಳ್ಳಬೇಕೆಂದು ನರಿಯಮ್ಮಳನ್ನು ಮಾತನಾಡಿಸಿದ ಕೊಕ್ಕರೆ ಮೊದಲಿಗೆ ಅಭಿನಂದನೆ ಹೇಳಿತು. ನಂತರ ಅವಳ ಬುದ್ಧಿವಂತಿಕೆಯನ್ನು ಹೊಗಳಿತು. ತನಗೂ ಪಾಠ ಹೇಳಿಕೊಡುವಂತೆ ಕೇಳಿಕೊಂಡಿತು.

ನರಿಯಮ್ಮನಿಗೆ ಕೊಕ್ಕರೆ ಉದ್ದೇಶ ಅರ್ಥವಾಯಿತು. ಆದರೂ ಕೊಕ್ಕರೆಯನ್ನು ಶಿಷ್ಯಳನ್ನಾಗಿ ಸ್ವೀಕರಿಸಲು ಒಪ್ಪಿತು. ಮರು ದಿವಸದಿಂದಲೇ ಪಾಠಕ್ಕೆ ಬರುವಂತೆ ಸೂಚಿಸಿ